# ಖನ್ನೂರ ವಿದ್ಯಾನಿಕೇತನ ಸ್ಕೂಲ್, ರಾಣೆಬೆನ್ನೂರ

## ಎರಡನೆಯ ಆವರ್ತಕ ಪರೀಕ್ಷೆ ಸೆಪ್ಟೆಂಬರ್ - 2020

ತರಗತಿ : 9 ವಿಷಯ : ದ್ವಿತೀಯ ಭಾಷೆ ಕನ್ನಡ ಅಂಕಗಳು : 20

**(Use KANNADA H W Note Book to ANSWER)**

ವಿಭಾಗ ಎ (ವಾಚನ ಮತ್ತು ಗ್ರಹಿಕಾ ಕೌಶಲ) : 4 ಅಂಕಗಳು

1. ಕೆಳಗಿನ ಗದ್ಯಭಾಗ ಓದಿಕೊಂಡು ಅದರ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ:

ಒಬ್ಬ ವಿಧವೆಯದು ಒಂದು ಸಣ್ಣ ತರಕಾರಿ ಅಂಗಡಿ ಇತ್ತು. ಅದರಿಂದಲೇ ಆಕೆಯ ಜೀವನ ಸಾಗುತ್ತಿತ್ತು. ಅವಳಿಗೆ ಒಬ್ಬನೇ ಮಗ. ಅವನನ್ನು ಓದಿಸಬೇಕೆಂಬ ಹಂಬಲ. ದೊಡ್ಡ ಶಾಲೆಗೆ ಸೇರಿಸಿದ್ದಳು. ಅವನ ಸಹಪಾಠಿಗಳು ಶ್ರೀಮಂತರ ಮಕ್ಕಳು. ತಾಯಿ ಮಗನ ವಿದ್ಯಾಭ್ಯಾಸದ ಬಗ್ಗೆ ತಿಳಿಯಲು ಶಾಲೆಗೆ ಬಂದಳು. ಹರಕಲು ಸೀರೆ, ಬಡಕಲು ಶರೀರದ ಆಕೆಯನ್ನು ನೋಡಿದ ಸಹಪಾಠಿಗಳು ಗೇಲಿ ಮಾಡಿದರು. ಇದರಿಂದ ಅವನಿಗೆ ಅವಮಾನವಾದಂತಾಯಿತು. ಸಾಯಂಕಾಲ ಮನೆಗೆ ಬಂದು ತಾಯಿಯನ್ನು ತರಾಟೆಗೆ ತೆಗೆದುಕೊಂಡನು. ಇನ್ನೊಮ್ಮೆ ಶಾಲೆಯ ಹತ್ತಿರ ಬಾರದಂತೆ ತಾಕೀತು ಮಾಡಿದ. ದಿನಗಳು ಉರುಳಿದವು. ಮಗ ದೊಡ್ಡವನಾದನು. ಚೆನ್ನಾಗಿ ಓದಿದ. ಹೊರದೇಶಕ್ಕೆ ಹೋದ. ತಾಯಿಯನ್ನು ಮರೆತೇ ಬಿಟ್ಟನು. ಅವನು ಭಾರತಕ್ಕೆ ಬಂದಾಗ ತಾಯಿಯ ಮನೆ ನೆನಪಾಯಿತು. ಊರಿಗೆ ಬಂದ. ತಾಯಿ ಸತ್ತ ಸುದ್ದಿ ತಿಳಿಯಿತು. ಮರುಗಿದ. ಸಾಯುವ ಮುನ್ನ ಒಂದು ಪತ್ರ ಬರೆಸಿ ಮಗ ಬಂದರೆ ಕೊಡಲು ಮನೆಯ ಮಾಲೀಕನಿಗೆ ತಿಳಿಸಿದ್ದಳು. ಅದನ್ನು ಬಿಡಿಸಿ ನೋಡಿದಾಗ ಮಗು ನೀನು ಚಿಕ್ಕವನಿದ್ದಾಗ ನಡೆದ ಅಪಘಾತದಲ್ಲಿ ಒಂದು ಕಣ್ಣನ್ನು ಕಳೆದುಕೊಂಡಿದ್ದೆ. ಎಲ್ಲರೂ ನಿನ್ನನ್ನು ಕುರುಡ ಎಂದು ಕರೆಯಬಾರದೆಂದು ವೈದ್ಯರಲ್ಲಿಗೆ ಹೋದೆನು. ನನ್ನ ಕಣ್ಣನ್ನು ತೆಗೆದು ನಿನಗೆ ಹಾಕಲು ಹೇಳಿದೆ, ಅವರು ಆಗುವುದಿಲ್ಲ ಎಂದರು. ಆಗ ಸತ್ತ ನಂತರ ದಾನ ಮಾಡಿದ್ದ ಬೇರೊಬ್ಬರ ಕಣ್ಣನ್ನು ನಿನಗೆ ಕಸಿ ಮಾಡಿದರು. ಚಿಕಿತ್ಸೆಗೆ ಕೊಡಬೇಕಾದ ಹಣಕ್ಕಾಗಿ ನಾನು ಕೊನೆ ಉಸಿರು ಇರುವವರೆಗೆ ದುಡಿದು ತೀರಿಸಿದ್ದೇನೆ. ನೀನು ಎಲ್ಲಿಯೇ ಇರು ಚೆನ್ನಾಗಿರು. ಇದೆ ನನ್ನ ಹರಕೆ ಪತ್ರ. ಇದನ್ನು ಓದಿ ಅವನ ಕಣ್ಣಲ್ಲಿ ನೀರು ಬಂದಿತು. ಇಂತಹ ತಾಯಿಯನ್ನು ಸರಿಯಾಗಿ ನೋಡಿಕೊಳ್ಳಲಿಲ್ಲ. ಎಂದು ದುಃಖಿಸಿದನು.

ಪ್ರಶ್ನೆಗಳು :

| | | | |
|---|---|---|---|
| 1) ತಾಯಿಯ ಹಂಬಲ ಏನಾಗಿತ್ತು? | 1 | 3) ತಾಯಿಯು ಪತ್ರದಲ್ಲಿ ಏನೇನು ಬರೆದಿದ್ದಳು ? | 1 |
| 2) ಹುಡುಗನ ಸ್ನೇಹಿತರು ಆತನನ್ನು ಏಕೆ ಗೇಲಿ ಮಾಡಿದರು ? | 1 | 4) ಮಗನ ದುಃಖಕ್ಕೆ ಕಾರಣವೇನು ? | 1 |

ವಿಭಾಗ -ಬಿ (ಬರವಣಿಗೆಯ ಕೌಶಲ) : 3 ಅಂಕಗಳು

2) ನಿಮ್ಮ ಹುಟ್ಟುಹಬ್ಬಕ್ಕೆ ಆಹ್ವಾನಿಸಿ ನಿಮ್ಮ ಗೆಳೆಯ /ಗೆಳತಿಗೆ ಒಂದು ಪತ್ರ ಬರೆಯಿರಿ. 3

ವಿಭಾಗ - ಸಿ (ಅನ್ವಯಿಕ ವ್ಯಾಕರಣ) : 5 ಅಂಕಗಳು

3) ಈ ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರ ಬರೆಯಿರಿ:

1) ಈ ಪದಗಳನ್ನು ಬಿಡಿಸಿ, ಸಂಧಿಯ ಹೆಸರು ತಿಳಿಸಿ: 1) ಊರಿಂದ 2) ಮರವನ್ನು 2

2) ಈ ಪದಗಳಿಗೆ ದ್ವಿರುಕ್ತಿ ಪದಗಳನ್ನು ಬರೆಯಿರಿ: 1) ತುತ್ತ 2) ನಿಲ್ಲು 1

3) ಪದಗಳ ಅರ್ಥ ಬರೆಯಿರಿ: 1) ನವ 2) ಮಾರ್ದನಿ 2

ವಿಭಾಗ - ಡಿ (ಪಠ್ಯಗಳ ಅಧ್ಯಯನ) : 8 ಅಂಕಗಳು

4. ಕೆಳಗಿನ ಪ್ರತಿ ಪ್ರಶ್ನೆಗೂ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. 5

1. ಯಾವ ದೇವತೆಯ ಹೆಸರಿನಲ್ಲಿ ಜಾತ್ರೆಯು ನಡೆಯುತ್ತಿತ್ತು?

ಎ) ದುರ್ಗಾದೇವಿ ಬಿ) ಮಾರಿಕಾಂಭಾ ಸಿ) ಚಂಡಮಾರಿ ಡಿ) ಮಹಾಕಾಳಿ

2. ಮಾರಿದತ್ತನ ಬಳಿಯಿದ್ದ ತಳಾರನ ಹೆಸರೇನು?

ಎ) ಚಂದ್ರದತ್ತ ಬಿ) ಅಷ್ಟಾವಾಂಕ ಸಿ) ಸುದತ್ತ ಡಿ) ಚಂಡಕರ್ಮ

3. ಹೊಸಹಾಡು ಪದ್ಯವನ್ನು ಬರೆದ ಕವಿ ಯಾರು?

ಎ) ಶಿವರಾಮ ಕಾರಂತ ಬಿ) ಕಯ್ಯಾರ ಕಿಞ್ಞಣ್ಣ ರೈ ಸಿ) ಸು. ರಂ. ಎಕ್ಕುಂಡಿ ಡಿ) ಶಾಂತರಸ

4. ಜನ್ನ ಕವಿಯ ಜನ್ಮ ಸ್ಥಳ ಯಾವುದು?

ಎ)ಹಳೇಬೀಡು ಬಿ) ಬೇಲೂರು ಸಿ) ಹಂಪೆ ಡಿ) ಮೈಸೂರ

5. ಚಂಡಕರ್ಮನು ಯಾರನ್ನು ಹಿಡಿದು ತಂದನು?

ಎ) ಅಭಯರುಚಿಯ ಅಭಯಮತಿಯರನ್ನು ಬಿ) ರಾಮ-ಲಕ್ಷ್ಮಣರನ್ನು ಸಿ) ಲವ-ಕುಶರನ್ನು ಡಿ) ಊರ ಜನರನ್ನು

5. ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ. 3

1) ನಿಯತಿಯನಾರ್ ಮೀರಿದಪರ್

*****

**SEND THE PHOTO or PDF of this ANSWER SHEET to**

**Mr.H.K.Makari Sir on 8197183534**